ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ

ಸಿ.ಸಿ. ಸಂಖ್ಯೆ:**2029/2025**

ಪಿರ್ಯಾದಿ : ರಾಜ್ಯ, ಪರವಾಗಿ ಮೂಡಿಗೆರೆ ಅಬಕಾರಿ ವಲಯ,
ಮೂಡಿಗೆರೆ ತಾಲ್ಲೂಕು.

ವಿರುದ್ಧ

ಆರೋಪಿ : ಭಾನು, ವಯಸ್ಸು ಸುಮಾರು 30 ವರ್ಷ,
ಕೋಂ ಪ್ರಸನ್ನ, ವಾಸಃ ಕುಪ್ಪೆಗದ್ದೆ,
ಹಳಸೆ ಗ್ರಾಮ, ಮೂಡಿಗೆರೆ ತಾಲ್ಲೂಕು.

ದೋಷಾರೋಪಣೆ

ಶ್ರೀ ವಿಶ್ವನಾಥ್.ಎ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ-

ದಿನಾಂಕ 28.03.2025 ರಂದು ಬೆಳಗ್ಗೆ 7.00 ರ ಸಮಯದಲ್ಲಿ ಮೂಡಿಗೆರೆ ಅಬಕಾರಿ ವ್ಯಾಪ್ತಿಯ ಹಳಸೆ ಗ್ರಾಮದ ಕುಪ್ಪೆಗದ್ದೆ ವಾಸಿ ಆರೋಪಿಯಾದ ನೀವು ನಿಮಗೆ ಸೇರಿದ ವಾಸದ ಮನೆಗೆ ಹೊಂದಿಕೊಂಡಿರುವ ಕಡಿಯಾರದಲ್ಲಿ ಅಕ್ರಮವಾಗಿ ಒಟ್ಟು 30 ಲೀಟರ್ ನಷ್ಟು ಬೆಲ್ಲದಕೊಳೆ ಹಾಗೂ ಒಟ್ಟು 2 ಲೀಟರ್ ನಷ್ಟು ಕಳ್ಳಭಟ್ಟಿ ಸಾರಾಯಿಯನ್ನು ಅಕ್ರಮವಾಗಿ ತಯಾರಿಸಿ ಮಾರಾಟ ಮಾಡುವ ಉದ್ದೇಶದಿಂದ ನಿಮ್ಮ ವಶದಲ್ಲಿಟ್ಟುಕೊಂಡಿದ್ದಾಗ ಅಬಕಾರಿ ಪೊಲೀಸರು ನಡೆಸಿದ ದಾಳಿ ಕಾಲಕ್ಕೆ ಸಿಕ್ಕಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ **32** ಮತ್ತು **34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ನಿಮಗೆ ಸೇರಿದ ವಾಸದ ಮನೆಗೆ ಹೊಂದಿಕೊಂಡಿರುವ ಕಡಿಯಾರದಲ್ಲಿ ಬೆಲ್ಲದಕೊಳೆ ಮತ್ತು ಕಳ್ಳಭಟ್ಟಿ ಸಾರಾಯಿಯನ್ನು ಅಕ್ರಮವಾಗಿ ಇಟ್ಟುಕೊಂಡಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ **38**ಎ ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**3.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಬೆಲ್ಲದಕೊಳೆ ಮತ್ತು ಕಳ್ಳಭಟ್ಟಿ ಸಾರಾಯಿ ಮಾನವನ ಆರೋಗ್ಯಕ್ಕೆ ಅಪಾಯಕಾರಿಯಾದ ಪಾನೀಯ ಎಂದು ತಿಳಿದೂ

ಸಹ ಅದನ್ನು ಮಾರಾಟ ಮಾಡುವ ಉದ್ದೇಶದಿಂದ ಸ್ವಾಧೀನ ಹೊಂದಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **275** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ*?*

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ*?* ಅವುಗಳು ನಿಮಗೆ ಅರ್ಥವಾಯಿತೇ*?*

ಆರೋಪಿಯ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ*?*

ಆರೋಪಿಯ ಉತ್ತರಃ

*(*ಆರೋಪಿಗೆ ದಿನಾಂಕ 09.10.2025 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ*)*

**Sd/-**

ಮೂಡಿಗೆರೆ<br>ದಿನಾಂಕಃ 09.10.2025

ಪ್ರಧಾನ ಸಿವಿಲ್ ನ್ಯಾಯಾಧೀಶರು<br>ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.